ಪರಿಗಣಿಸಿ ಹಿಂತೆಗೆದುಕೊಳ್ಳಲಾಗಿದೆ. ಎಲ್ಲಾ ಜಿಲ್ಲಾಧಿಕಾರಿಗಳು ಈಗಾಗಲೇ ಘೋಷಿಸಿರುವ ಚುನಾವಣಾ ಪೇಳಾಪಟ್ಟಿಗಳನ್ನು ಹಾಗೂ ಅವುಗಳನ್ವಯ ತೆಗೆದು ಕೊಂಡಿರುವ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ."

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ನಜೀರ್ ಅವಾಜ್ ಯೋಜನೆ

೨೦೫ (೭೭೬) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ಸರ್ಕಾರ ನಜೀರ್ ಅವಾಜ್ ಯೋಜನೆಯನ್ನು ಯಾವಾಗ ಜಾರಿಗೆ ತಂದಿತು ಮತ್ತು ಇದುವರೆವಿಗೂ ಒದಗಿಸಿರುವ ಹಣ ಎಷ್ಟು ?

ಆ) ಪ್ರತಿಯೊಂದು ಜಿಲ್ಲಾಗೂ ಮಂಜೂರು ಮಾಡಿರುವ ಮನೆಗಳು ಎಷ್ಟು ? ಮತ್ತು ಜಿಲ್ಲಾವಾರು ವಾಸ್ತವಿಕವಾಗಿ ಬಿಡುಗಡೆ ಮಾಡಿರುವ ಹಣ ಮತ್ತು ದಿನಾಂಕ

ಇ) ವೆಚ್ಚ ಮಾಡಿರುವ ಹಣ ಮತ್ತು ಜನವರಿ ೮೯ರ ಅಂತ್ಯದಲ್ಲಿ ಪೂರ್ಣಗೊಳಿಸಿದ ಮನೆಗಳ ಸಂಖ್ಯೆ?

ಈ) ಜಿಲ್ಲಾವಾರು ಅಪೂರ್ಣಗೊಂಡ ಮನೆಗಳ ಸಂಖ್ಯೆ ಮತ್ತು ಪೂರ್ಣಗೊಳಿಸ ಫಲಾನುಭವಿಗಳಿಗೆ ಹಸ್ತಾಂತರಿಸಲು ಬೇಕಾಗುವ ಹಣ

ಉ) ಯಾವಾಗ ಮನೆಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ) ೧೯೮೮-೮೯ನೇ ಸಾಲಿನಲ್ಲಿ ೧೧೪೫ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ತಃಖ್ತೆ 1 ಲಗತ್ತಿಸಿದೆ.

ಇ) ತಃಖ್ತೆ 11 ಲಗತ್ತಿಸಿದೆ.

ಈ) ತಃಖ್ತೆ 2 ರಂತೆ.

ಉ) ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಮನೆಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸುವ ಯೋಜನೆ ಇದೆ.

STATEMENT NO. 1

Statement showing the districtwise allotment under Nazir Nivas and releases with dates

(Rs. in lakhs)

Sl. No.	District	No. of houses sanctioned	Amount released on			
			I qtr. 30-4-88	II qtr. 11-7-88	III qtr. 12-10-88	IV qtr. 24-2-89
1	B'lore (U)	300	3.520	3.520	2.594	10.000
2	B'lore (Rural)	800	10.559	10.559	7.753	40.000
3	Kolar	1100	13.654	13.654	10.021	50.000
4	Tumkur	1000	12.447	12.447	9.128	45.000
5	Chitradurga	900	11.636	11.636	8.533	40.000
6	Shimoga	900	9.801	9.801	7.187	35.000
7	Mysore	1100	15.324	15.324	11.241	30.000
8	Mandya	700	8.227	15.324	6.038	30.000
9	Hassan	800	7.232	7.232	5.304	25.000
10	Chickmagalur	700	5.540	5.542	4.082	20.000
11	Kodagu	300	2.598	2.598	1.912	10.000
12	D. Kannuda	800	9.328	9.328	6.849	30.000
13	Belgaum	1100	14.310	14.310	10.504	50.000
14	Bijapur	1100	12.118	12.118	8.889	45.000
15	Dharwad	1700	13.625	13.625	9.993	30 000
16	U. Kannada	1100	3.524	3.524	2.594	5.000
17	Gulbarga	1000	13.248	13.248	9.724	45.000
18	Raichur	900	10.593	10.593	7.768	30.000
19	Bellary	800	9.347	9.347	0.860	30.000
20	Bidar	500	6.489	6.489	4.777	15.000
	Total	17500	193.125	193.125	141.750	615.000

STATEMENT—II

Sl. No.	District	Target for 1988–89	Achievement till end of Jan. 1989	Balance	Expenditure till end of Jan. 1989
1	Bangalore (U)	150	81	69	6.556
2	Bangalore (R)	400	173	227	17.646
3	Kolar	550	129	421	13.158
4	Tumkur	500	200	300	20.400
5	Chitradurga	450	54	396	34.010
6	Shimoga	450	218	232	15.261
7	Mysore	550	217	333	12.401
8	Mandya	350	50	300	5.100
9	Hassan	400	114	286	6.345
10	Chickmagalur	350	93	257	5.806
11	Kodagu	150	76	74	9.120
12	D. Kannada	400	191	209	17.240
13	Belgaum	500	253	247	10.896
14	Bijapur	550	98	297	10.878
15	Dharwad	850	8	842	0.888
16	U. Kannada	550	92	458	0.752
17	Gulbarga	500	175	325	24.683
18	Raichur	450	136	314	6.026
19	Bellary	400	—	400	—
20	Bidar	250	45	205	4.590
	Total	8750	2403	6347	221.756

ಶ್ರೀ ಧರ್ಮಸಿಂಗ್.—ಮಾನ್ಯ ಮಂತ್ರಿಗಳು ನಜೀರ್ ಆವಾಜ್ ಸ್ಕೀಮ್‌ನಲ್ಲಿ ೧೯೮೮–೮೯ನೇ ಸಾಲಿನಲ್ಲಿ ಎಷ್ಟು ವಸತಿಗಳನ್ನು ಮಂಜೂರು ಮಾಡಲಾಗಿದೆಯೆಂಬುದನ್ನು ಗುರುತುಪಡಿಸಿಲ್ಲ. ೧೯೮೮–೮೯ನೇ ಸಾಲಿನಲ್ಲಿ ೧೭,೫೦೦ ಮನೆಗಳನ್ನು ಕಟ್ಟಬೇಕೆಂದು ನಿಗದಿಪಡಿಸಲಾಗಿದೆ. ಅದಕ್ಕಾಗಿ ತಗಲುವ ಒಟ್ಟು ವೆಚ್ಚ ೧೦ ಲಕ್ಷದ ೩೨ ಸಾವಿರ ರೂಪಾಯಿಗಳೆಂದು ಅಂದಾಜು ಹಾಕಿಕೊಂಡಿದ್ದಾರೆ. ಆದರ ಜೊತೆಗೆ ೧೧ ಲಕ್ಷದ ೪೩ ಸಾವಿರ ರೂಪಾಯಿಗಳನ್ನು ೧೯೮೮–೮೯ನೇ ಸಾಲಿನಲ್ಲಿ ಖರ್ಚು ಮಾಡಬೇಕೆಂದು ಅಂದಾಜು ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ. ನೀವು ೮,೬೫೦ ಮನೆಗಳನ್ನು ಕಟ್ಟಲಿಕ್ಕೆ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಏನು ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ನೀವು ೨,೪೦೦ ಮನೆಗಳನ್ನು ಮಾತ್ರ ಪೂರ್ಣ ಮಾಡಿದ್ದೀರಿ. ಉಳಿದ ೬,೩೪೭ ಮನೆಗಳನ್ನು ಇನ್ನೂ ಕಟ್ಟಬೇಕಾಗಿದೆ. ಅದಕ್ಕಾಗಿ ೨೨೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಜೀರ್ ನಿವಾಸ್ ಮನೆಗಳನ್ನು ಕಟ್ಟಲಿಕ್ಕೆ ನೀವು ಹಾಕಿಕೊಂಡ ಕಾರ್ಯಕ್ರಮದಂತೆ ಈಗಾಗಲೇ ನೀವು ಕಮಿಟ್ ಮಾಡಿಕೊಂಡಿದ್ದೀರಿ, ಎಲ್ಲಾ ಕಡೆಗೂ ಬೇಗ ಮನೆಗಳನ್ನು ಕಟ್ಟುವ ಆದೇಶವನ್ನು ನೀಡಬೇಕು. ಮನೆಗಳನ್ನು ಕಟ್ಟಬೇಕೆಂದು ಏನು ಘೋಷಣೆಯನ್ನು ಮಾಡಿದ್ದೀರಿ, ಆಸ್ಪೆ ಆಸಕ್ತಿ ವಹಿಸಿ ಕೆಲಸ ಮಾಡಬೇಕು. ಇದರ ಲಾಭ ಜನರಿಗೆ ಮುಟ್ಟಬೇಕಾಗಿದೆ. ಆದರೆ ಆ ಕೆಲಸ ನಿಮ್ಮಿಂದ ಆಗಿಲ್ಲವೆನ್ನುವುದು ನನ್ನ ಅನಿಸಿಕೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಒಳ್ಳೆಯ ಉದ್ದೇಶದಿಂದ ಉಪ ಪ್ರಶ್ನೆಯನ್ನು ಹಾಕಿದ್ದಾರೆ. ನಜೀರ್ ನಿವಾಸ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ದೃಢೀಕರಣ ಯೋಜನೆಯನ್ವಯ ಎಸ್‌ಆರ್‌ಇಪಿ ಯೋಜನೆಯನ್ನು ಏನು ಜಾರಿಗೆ ತರಲಾಗಿದೆ ಅದರಿಂದ ಹಣವನ್ನು ಸಂಗ್ರಹ ಮಾಡಿ ಮನೆಗಳನ್ನು ಕಟ್ಟಬೇಕೆಂದು ದಿನಾಂಕ ೨೪–೨–೮೯ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಆದ್ದರಿಂದ ಹಣವನ್ನು ಹೆಚ್ಚು ಖರ್ಚು ಮಾಡಲಿಕ್ಕೆ ಆಗಿಲ್ಲ. ಈಗಾಗಲೇ ೨೪೦೩ ಮನೆಗಳನ್ನು ಕಟ್ಟಿದ್ದೇವೆ. ಉಳಿದಿರತಕ್ಕ ೬೩೪೭ ಮನೆಗಳನ್ನು ಈ ವರ್ಷದ ಕೊನೆಯೊಳಗೆ ಕಟ್ಟುತ್ತೇವೆ. ೧೯೮೮-೮೯ನೇ ಸಾಲು ಮಾರ್ಚ್ ೩೧ಕ್ಕೆ ಮುಕ್ತಾಯವಾಗುತ್ತದೆ: ಮುಂದಿನ ವರ್ಷ ಇದಕ್ಕಾಗಿ ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತೇವೆ. ಈ ಹಣವನ್ನು ಫೆಬ್ರುವರಿ ತಿಂಗಳಲ್ಲಿ ಬಿಡುಗಡೆ ಮಾಡಿದ್ದರಿಂದ ಅಷ್ಟು ಪ್ರಗತಿಯನ್ನು ಸಾಧನೆ ಮಾಡಲಿಕ್ಕೆ ಆಗಿಲ್ಲ. ಸರ್ಕಾರ ದಿವಂಗತ ನಜೀರ್‌ಸಾಬ್‌ರವರ ಹೆಸರಿನಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಪ್ರಾರಂಭ ಮಾಡಿದೆ ಆ ಪ್ರಕಾರ ಕೆಲಸ ಮಾಡುತ್ತದೆ. ಈ ಯೋಜನೆಯ ಪ್ರಕಾರ ೧೭,೫೦೦ ಮನೆಗಳನ್ನು ಕಟ್ಟಬೇಕಾಗಿದೆ, ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ಧರ್ಮಸಿಂಗ್.—ತಾವು ಲೋಹಿಯಾ ವಾಡಿಗಳು, ನಜೀರ್ ನಿವಾಸ್ ಯೋಜನೆಯಲ್ಲಿ ೧೭,೫೦೦ ಮನೆಗಳನ್ನು ಕಟ್ಟಬೇಕೆಂದು ಏನು ಯೋಜನೆ ಹಾಕಿಕೊಂಡಿದ್ದೀರಿ. ಅದರಲ್ಲಿ ೮೬೫೦ ಮನೆಗಳನ್ನು ಕಟ್ಟಲಿಕ್ಕೆ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದರಲ್ಲಿ ೨೪೦೩ ಮನೆಗಳನ್ನು ಕಟ್ಟಿದ್ದೀರಿ, ಉಳಿದಿರತಕ್ಕ ೬೩೪೭ ಮನೆಗಳನ್ನು ಕಟ್ಟಬೇಕಾಗಿದೆಯೆಂದು ತಾವು ಹೇಳಿದ್ದೀರಿ. ೧೯೮೮–೮೯ನೇ ಸಾಲಿನಲ್ಲಿರತಕ್ಕ ಬ್ಯಾಕಲಾಗ್ ಏನಿದೆ ಅದಕ್ಕಾಗಿ ಹಣವನ್ನು ಬಿಡುಗಡೆ ಮಾಡಿ ಮನೆಗಳನ್ನು ಕಟ್ಟುವ ವ್ಯವಸ್ಥೆ ಮಾಡುತ್ತೀರಾ ? ೧೭,೫೦೦ ಮನೆಗಳನ್ನು ಕಟ್ಟಬೇಕೆಂದು ಸರ್ಕಾರ ಮನಸ್ಸು ಮಾಡಿದೆ ಅದರಲ್ಲಿ ೨೪೦೩ ಮನೆಗಳನ್ನು ಕಟ್ಟಿದ್ದೇವೆಂದು ಹೇಳಿದ್ದೀರಿ, ಉಳಿದಿರತಕ್ಕ ೬೩೪೭ ಮನೆಗಳನ್ನು ಕಟ್ಟಲಿಕ್ಕೆ ತಾವು ಜಿಲ್ಲಾಪರಿಷತ್‌ಗಳಿಗೆ ಹೇಳಬೇಕು ಹಾಗೂ ಮನೆಗಳನ್ನು ಬೇಗ ಪೂರ್ಣಗೊಳಿಸಲಿಕ್ಕೆ ವ್ಯವಸ್ಥಿತವಾದ ಹಣವನ್ನು ತಾವು ರಿಲೀಸ್ ಮಾಡಬೇಕು. ಈ ಯೋಜನೆಯನ್ನು ಪೂರ್ಣಗೊಳಿಸತಕ್ಕಂಥ ಆಜ್ಞೆಯನ್ನು ತಾವು ಕೂಡಲೇ ಹೊರಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನಂ ಒಪ್ಪುತ್ತೇನೆ. ೧೧ ಕೋಟಿ ೪೩ ಲಕ್ಷ ರೂಪಾಯಿಗಳು ಈಗಾಗಲೇ ಬಿಡುಗಡೆಯಾಗಿದೆ. ಉಳಿದಿರತಕ್ಕಂಥ ೧೭,೫೦೦ ಮನೆಗಳನ್ನು ೧೯೮೯–೯೦ನೇ ಸಾಲಿನಲ್ಲಿ ಮುಗಿಸುತ್ತೇವೆ. ಬರುವ ವರ್ಷ ಸಂಪೂರ್ಣವಾಗಿ ಕಟ್ಟಡಗಳು ಆಗುತ್ತವೆ ಮತ್ತು ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಕೂಡ ಒದಗಿಸುತ್ತೇವೆ. ಇದಕ್ಕೆ ಯಾವ ಕೊರತೆ ಕೂಡ ಇಲ್ಲ ಫೆಬ್ರುವರಿ ತಿಂಗಳು ಆಗಿದ್ದರಿಂದ ಸ್ವಲ್ಪಮಟ್ಟಿಗೆ ಭೌತಿಕ ಪ್ರಗತಿಯನ್ನು ಸಾಧಿಸಿಲ್ಲ. ಹಣ ಇಲ್ಲ ಎನ್ನತಕ್ಕಂಥ ಪ್ರಶ್ನೆ ಬರಲಿಲ್ಲ. ಈಗಾಗಲೇ ೧೧ ಕೋಟಿ ೪೩ ಲಕ್ಷ ರೂಪಾಯಿಗಳು ಫೆಬ್ರುವರಿ ತಿಂಗಳಿನಲ್ಲಿ ಬಿಡುಗಡೆಯಾಗಿದೆ. ಭರವಸೆಯನ್ನು ಕೊಟ್ಟಿರುವ ಹಾಗೆ ೧೭,೫೦೦ ಮನೆಗಳನ್ನು ೧೯೮೯–೯೦ರ ಸಾಲಿನಲ್ಲಿ ಮುಕ್ತಾಯ ಮಾಡುತ್ತೇವೆ, ಹಣದ ಕೊರತೆ ಇದಕ್ಕೆ ಇಲ್ಲ.

ಶ್ರೀ ರಮೇಶಕುಮಾರ್.—ತಾಲ್ಲೂಕು ಪಂಚಾಯತ್ ಸಮಿತಿಗಳಲ್ಲಿ ಈ ವರ್ಷದ ಪೂರ್ಣ ಯೋಜನೆಗಳನ್ನು ಎನ್‌ಆರ್‌ಇಪಿ:ಆರ್‌ಎಲ್‌ಇಜಿಪಿ ಮೂಲಕ ಕೈಗೊಳ್ಳಲು ಇತ್ಯರ್ಥ ಮಾಡಿಯಾದ

ಮೇಲೆ ನಜೀರ್ ಅವಾಜ್ ಯೋಜನೆಯ ಸೂಚನೆ ಬಂದಿದೆ. ಇದಕ್ಕೆ ಏನು ಮಾಡಿದ್ದೀರಿ ಎಂದರೆ ೬೦ ಮನೆಗಳಿಗೆ ಮಾತ್ರ ಹೊಸದಾಗಿ ಹಣ ಕೊಡುತ್ತಿದ್ದೀರಿ, ಉಳಿದ ೪೦ರ ಹಣಕ್ಕೆ ಪ್ಲಾನ್ ಸೈಜಿನಲ್ಲಿ ಡಿಫರೆನ್ಸ್‌ನಲ್ಲಿ ಕಟ್ ಮಾಡಿ ಅಡ್ಜಸ್ಟ್ ಮಾಡಬೇಕೆಂದು ಹೇಳುತ್ತಿದ್ದೀರಿ. ಈ ಯೋಜನೆಯನ್ನು ಬದಲಾವಣೆ ಮಾಡಿ ಈ ರೀತಿ ಮಾಡುವುದಕ್ಕಿಂತ ಈ ೪೦ ಮನೆಗಳಿಗೆ ಕೂಡ ಹೊಸದಾಗಿ ಹಣವನ್ನು ಅಲಾಟ್ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಏಕೆಂದರೆ ನಮ್ಮ ಯೋಜನೆ ಪೂರ್ಣಗೊಂಡ ನಂತರ ಈ ಸೂಚನೆ ಬಂದಿದೆ.

ಶ್ರೀ ಎಂ. ಪಿ. ಪ್ರಕಾಶ್. —ಮಾನ್ಯ ಸದಸ್ಯರು ಎತ್ತಿರುವ ಸೂಚನೆ ಮೂಲಭೂತವಾದಂಥಾದ್ದು. ಏಕೆಂದರೆ ಎನ್‌ಆರ್‌ಇಪಿ ದುಡ್ಡಿನಲ್ಲಿ ಪುರುಹೊಂದಾಣಿಕೆ ಮಾಡಬೇಕಾಗಿರುವುದರಿಂದ ಅನೇಕ ಕಡೆ ಈ ಯೋಜನೆಯನ್ನು ಕಾರ್ಯಗತ ಗೊಳಿಸುವಂಥ ಸಂದರ್ಭದಲ್ಲಿ ಮನೆಗಳಿಗೆ ಹಣದ ಕೊರತೆಯಾಗಿದೆ ಎಂದು ಗೊತ್ತಾಗಿದೆ. ಈಗಾಗಲೇ ೧೧ ಕೋಟಿ ೪೩ ಲಕ್ಷ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ. ಉಳಿದಿರತಕ್ಕಂಥ ಹಣವನ್ನು ಬೇರೆ ಮೂಲಗಳಿಂದ ಭರಿಸಲು ಸರ್ಕಾರ ಜವಾಬ್ದಾರಿಯನ್ನು ಹೊರುತ್ತದೆ ಮರುಹೊಂದಾಣಿಕೆ ಮಾಡುವಂಥ ವೆಚ್ಚ ಬಂದಾಗ ಯಾರಿಗೂ ತೊಂದರೆಯಾಗದಂತೆ ಬೇರೆ ಕಡೆಯಿಂದ ಲಾದರೂ ಹಣ ತರುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಶಿವಶಂಕರಪ್ಪಗೌಡ ಶಿವಾರ್ಳ,—ನಜೀರ್‌ಅವಾಸ್ ಗ್ರೂಪ್ ಮನೆಗಳು ಬೇರೆ ಇವೆ. ಅದು ಎನ್.ಆರ್.ಇ.ಪಿ.ಯನ್ನೇ ಪರಿವರ್ತನೆ ಮಾಡಿ ನಜೀರ್‌ಅವಾಸ್ ಅನ್ನು ಮಾಡುತ್ತೀರಾ ? ಎರಡು ವರ್ಷಗಳಿಂದ ಯಾವುದೇ ಸಮೂಹ ಮನೆಗಳು ಎನ್.ಆರ್.ಇ.ಪಿ. ಯಲ್ಲಿ ಬಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್. —ಮಾನ್ಯ ಸದಸ್ಯರು ತಪ್ಪಾಗಿ ಭಾವಿಸಿರಬಹುದು. ಆರ್.ಎಲ್.ಇ.ಜಿಪಿ ಯಲ್ಲಿ ಗುಂಪು ಮನೆಗಳು ಇವೆ, ಇಂದಿರಾ ಆವಾಸ್ ಮನೆಗಳು ಎನ್.ಆರ್.ಇ.ಪಿ. ಯೋಜನೆಯಡಿ ಬರುತ್ತದೆ, ಇಲ್ಲಿಯವರೆಗೆ ಎನ್.ಆರ್.ಇ.ಪಿ. ಯೋಜನೆಯ ಕೆಳಗಡೆ ಇಂತಹ ಗುಂಪು ಮನೆಗಳ ವ್ಯವಸ್ಥೆ ಮಾಡಿರಲಿಲ್ಲ. ಈ ಒಂದು ಕಾನೂನಿಗೆ ಮೂಲಭೂತವಾದಂಥ ಆಗಲಿದ ದಿವಂಗತ ನಜೀರ್‌ಸಾಬ್ ಅವರ ಹೆಸರಿನಲ್ಲಿ ನಜೀರ್ ಅವಾಸ್ ಎನ್ನುವ ಒಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಈ ಹೊಸ ಯೋಜನೆಯನ್ನು ಎನ್.ಆರ್.ಇ.ಪಿ. ಯಲ್ಲಿ ಮಾಡುತ್ತಿದ್ದೇವೆ.

ಬೆಳಗಾವಿ ಜಿಲ್ಲಾ ಪರಿಷತ್‌ಗೆ ಬಿಡುಗಡೆ ಮಾಡಲಾದ ಅನುದಾನ

೨೦೬ (೭೭೨) ಶ್ರೀ ಚಂದ್ರಶೇಖರ ಎಂ. ಮಾಮನಿ (ಪಾರನ್‌ಗಡ).— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. —

ಅ) ದಿನಾಂಕ ೩೧–೩–೮೮ ರಿಂದ ೨೮–೨–೮೯ರವರೆಗೆ ಬೆಳಗಾವಿ ಜಿಲ್ಲಾ ಪರಿಷತ್ ಸಚಿವಾಲಯದಿಂದ ಎನ್.ಆರ್ ಇ.ಪಿ. ಆರ್.ಎಲ್,ಇ.ಜಿ.ಪಿ. ಡಿ.ಪಿ.ಎ.ಪಿ. ಪಶ್ಚಿಮ ಘಟ್ಟ ಹಾಗೂ ಇತರೆ ಯೋಜನೆಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಲಾದ ಹಾಗೂ ವೆಚ್ಚ ಮಾಡಲಾದ ಅನುದಾನದ ವಿವರ ನೀಡುವುದು.

ಆ) ಜಿಲ್ಲಾ ಪರಿಷತ್ ಬೆಳಗಾವಿ ತಾಂತ್ರಿಕ ವಿಭಾಗ ಚಿಕ್ಕೋಡಿ ಈ ವಿಭಾಗಕ್ಕೆ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು, ಇದರಂತೆ ಬೆಳಗಾವಿ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗ ಬೆಳಗಾವಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ) ವಿವರಗಳನ್ನು ತಃಖ್ತೆ ೧,೨, ಮತ್ತು ೩ರಲ್ಲಿ ಕೊಟ್ಟಿರುತ್ತದೆ.

ಆ)

		ಜಿ.ಪ. ತಾಂತ್ರಿಕ ವಿಭಾಗ ಬೆಳಗಾವಿ	ಜಿ.ಪ. ತಾಂತ್ರಿಕ ವಿಭಾಗ ಚಿಕ್ಕೋಡಿ
		(ಲಕ್ಷ ರೂ.ಗಳಲ್ಲಿ)	
೧)	ಎನ್‌ಆರ್‌ಇಪಿ	೫೪.೧೬೯	೮೯.೩೮೭
೨)	ಆರ್‌ಎಲ್‌ಇಜಿಪಿ	೩೬.೦೯೬	೨೦.೭೭೧
೩)	ಪ.ಘ.ಅ.ಯೋ	೩೬.೩೨೦	—
೪)	ಡಿ.ಪಿ.ಎ.ಪಿ.	೧.೫೦೦	೩.೫೦೦

(ಇನ್ನುಳಿದ ಯೋಜನೆಗಳಲ್ಲಿ ಯಾವುದೇ ತಾಂತ್ರಿಕ ವಿಭಾಗಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ)